ಸಿ.ಸಿ. ನಂಬರ್‍ಃ **2112/2024**

ಪಿ.ಡಬ್ಲ್ಯುಃ**1**

ದಿಃ**24-01-2026** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಆರೋಪಿ ಪರ ವಕೀಲರವರಿಂದ.**

1. ಆರೋಪಿಯ ಕಟ್ಟಡದಲ್ಲಿ 32 ರೂಮ್ ಗಳು ಇದ್ದವು. ಅವುಗಳ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಕಟ್ಟಡದಲ್ಲಿ ಆರೋಪಿಯು 32 ರೂಮ್ ಗಳಲ್ಲಿ ಕಾಟ್ ಗಳನ್ನು ಹಾಕಿ ಟ್ರೆಸರಿಯನ್ನು ಹಾಕಿ ಕೊಟ್ಟಿದ್ದ ಎಂದರೆ ಸರಿ. ಸಂಪೂರ್ಣ ಕಟ್ಟಡಕ್ಕೆ ರೂ.5,00,000/- ಡೆಪಾಸಿಟ್ ಕೊಟ್ಟಿದ್ದೀರಿ ಆದರೆ ಬಾಡಿಗೆ ಎಷ್ಟು ಇತ್ತು ಎಂದರೆ ಸಾಕ್ಷಿಯು ರೂಪಾಯಿ ಒಂದು ಲಕ್ಷದ ಚಿಲ್ಲರೆ ಪ್ರತಿ ತಿಂಗಳು ಇತ್ತು ಎಂದು ಹೇಳುತ್ತಾರೆ. ರೂಪಾಯಿ ಒಂದು ಲಕ್ಷ ಬಾಡಿಗೆ ಇತ್ತು ಎಂದು ನನ್ನ ಪಿರ್ಯಾದಿಯಲ್ಲಿ ಆಗಲೀ, ನೋಟಿಸ್ ದಲ್ಲಿ ಆಗಲೀ ಅಥವಾ ಮುಖ್ಯ ವಿಚಾರಣೆಯಲ್ಲಿ ಬರೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ಮತ್ತು ಆರೋಪಿಯ ಮಧ್ಯೆ ಇರುವ ನಿಜವಾದ ವ್ಯವಹಾರವನ್ನು ಮುಚ್ಚಿ ಇಟ್ಟು ಬಾಡಿಗೆ ಹಣ ಎಷ್ಟು ಇತ್ತು ಎನ್ನುವುದನ್ನು ಸಹ ಮುಚ್ಚಿ ಇಟ್ಟು ದುರುದ್ದೇಶದಿಂದ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ಡಿಸೆಂಬರ್ ತಿಂಗಳಿನ 2022 ರವರೆಗೆ ನಾವು ಆರೋಪಿಯ ಕಟ್ಟಡದಲ್ಲಿ ಬಾಡಿಗೆ ನಾತೆಯಿಂದ ಇದ್ದೆವು ಎಂದರೆ ಸಾಕ್ಷಿಯು ಮಾರ್ಚ ತಿಂಗಳಿನ 2020 ರವರೆಗೆ ಮಾತ್ರ ಇದ್ದೆವು, ಕೊವಿಡ್ ಬಂದ ನಂತರ ಹಾಸ್ಟೆಲ್ ಮುಚ್ಚಿತ್ತು ಎಂದು ಹೇಳುತ್ತಾರೆ. ಮಾರ್ಚ 2020 ರಲ್ಲಿ ಕಟ್ಟಡದ ಬಾಡಿಗೆಯಿಂದ ಬಿಟ್ಟಿದ್ದಕ್ಕೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಗೆಳೆಯನಾಗಿದ್ದರಿಂದ ಬಾಯಿಮಾತಿನಲ್ಲಿ ಬಿಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾವು ಡಿಸೆಂಬರ್ 2022 ರವರೆಗೆ ಬಾಡಿಗೆ ನಾತೆಯಿಂದ ಆರೋಪಿಯ ಕಟ್ಟಡದಲ್ಲಿ ಮುಂದುವರೆದಿದ್ದರಿಂದ ಬಾಡಿಗೆಯಿಂದ ಬಿಟ್ಟಿದ್ದಕ್ಕೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ಕಟ್ಟಡವನ್ನು 2022 ರಲ್ಲಿ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿಯು ಆರೋಪಿಯು ಮಾರಾಟ ಮಾಡಿದ

ಕಟ್ಟಡದ ಮಾಲೀಕರಿಂದ ಮತ್ತೆ ನಾವು 2022 ರಲ್ಲಿ ಸದರಿ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡಿದ್ದೇವೆ ಹಾಗೂ ಈಗ ಅಲ್ಲಿಯೇ ಮುಂದುವರೆದಿದ್ದೇವೆ ಎಂದು ಹೇಳುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಮ್ಮ ಶಿಕ್ಷಣ ಸಂಸ್ಥೆಯ ಆಸ್ತಿ ಲೆಕ್ಕಪತ್ರವನ್ನು ಮಾಡಿಸುತ್ತೇವೆ ಎಂದರೆ ಸರಿ. ಪ್ರತಿವರ್ಷ ನಮ್ಮ ಸಂಸ್ಥೆಯ ಆಡಿಟ್ ಆಗುತ್ತದೆಯಾ ಎಂದರೆ ಆಗುತ್ತದೆ ಎಂದು ಹೇಳುತ್ತಾರೆ. ನಮ್ಮ ಶಿಕ್ಷಣ ಸಂಸ್ಥೆಯಿಂದ ಸದರಿ ಆರೋಪಿಯ ಕಟ್ಟಡಕ್ಕೆ ಬಾಡಿಗೆ ಕಟ್ಟಿದ್ದ ಬಗ್ಗೆ ಲೆಕ್ಕ ಪತ್ರದಲ್ಲಿ ನಮೂದು ಇದೆಯಾ ಎಂದರೆ ಸಾಕ್ಷಿಯು ವ್ಯಯುಕ್ತಿಕವಾಗಿ ಆರೋಪಿಯ ಕಟ್ಟಡವನ್ನು ಬಾಡಿಗೆ ತೆಗೆದುಕೊಂಡಿದ್ದೇವೆ ಹಾಗಾಗಿ ಬಾಡಿಗೆಯನ್ನು ಸಹ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನನ್ನ ದೂರಿನ ಮೂರನೇ ಖಂಡಿಕೆಯಲ್ಲಿ ಆರೋಪಿಯ ಕಟ್ಟಡವನ್ನು ನಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಗಾಗಿ ಬಾಡಿಗೆಗೆ ತೆಗೆದುಕೊಂಡಿದ್ದೇವೆ ಎಂದು ನಮೂದು ಮಾಡಿದ್ದೇವೆ ಎಂದರೆ ಸರಿ.

4. ಬಾಡಿಗೆ ತೆಗೆದುಕೊಂಡಿದ್ದು ನಮ್ಮ ಸಂಸ್ಥೆಯ ಭಾಗವಾಗಿದ್ದು ಅದನ್ನು ವಾಣಿಜ್ಯ ತೆರಿಗೆ ಕಾಯಿದೆ ಅಡಿಯಲ್ಲಿ ತೆರಿಗೆ ಕಟ್ಟುವಾಗ ನಮೂದು ಮಾಡದೇ ಇದ್ದಿದ್ದು ಕಾನೂನು ಅಪರಾಧ ಆಗುತ್ತದೆ ಎಂದರೆ ಸರಿಯಲ್ಲ. ನಾನು ವೈಯುಕ್ತಿಕವಾಗಿ ಆದಾಯ ತೆರಿಗೆಯನ್ನು 2000 ರಿಂದ ಕಟ್ಟುತ್ತೇನೆ. ನನ್ನ ಆದಾಯ ತೆರಿಗೆಯಲ್ಲಿ ಕಟ್ಟಡದ ಬಾಡಿಗೆಯನ್ನು ಕಟ್ಟಿದ್ದ ಬಗ್ಗೆ ನಮೂದು ಮಾಡಿದ್ದೀರಾ ಎಂದರೆ ಮಾಡಿಲ್ಲ, ಸಾಕ್ಷಿಯು ಮುಂದುವರೆದು ಅಕೌಂಟ್ ಮುಖಾಂತರ ಬಾಡಿಗೆ ಕಟ್ಟುತ್ತಿದ್ದರಿಂದ ನಮೂದು ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ ಹಾಗೂ ಟಿ ಡಿ ಎಸ್ ಸಹ ಕಟ್ ಆಗಿರುತ್ತದೆ ಎಂದು ಹೇಳುತ್ತಾರೆ. ಅಕೌಂಟ್ ಮುಖಾಂತರ ಬಾಡಿಗೆಯನ್ನು ಕಟ್ಟಿದ್ದರೂ ಸಹ ಅದನ್ನು ತೆರಿಗೆಯಲ್ಲಿ ತೋರಿಸಬೇಕು ಎಂದರೆ ಸರಿ. ಆರೋಪಿ ಹಾಗೂ ನನ್ನ ಮಧ್ಯೆ ಆ ರೀತಿ ಯಾವುದೇ ವ್ಯವಹಾರ ಇಲ್ಲದೇ ಇದ್ದಿದರಿಂದ ಅದನ್ನು ನಾನು ವ್ಯಯುಕ್ತಿಕವಾಗಿ ತೆರಿಗೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ.

5. ನನ್ನ ದೂರಿನ ಖಂಡಿಕೆ ನಾಲ್ಕರಲ್ಲಿ ನನ್ನ ಹತ್ತಿರ ಅಷ್ಟು ರೂಪಾಯಿ ಏಳು ಲಕ್ಷ ಹಣ ಇಲ್ಲ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಸಮಯದಲ್ಲಿ ನನ್ನ ಹತ್ತಿರ ಹಣ ಇರಲಿಲ್ಲ, Adjust ಮಾಡಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿಗೆ ರೂಪಾಯಿ ಏಳು ಲಕ್ಷ ಹಣ ಕೊಟ್ಟ ಬಗ್ಗೆ ನನ್ನ ಆದಾಯ ತೆರಿಗೆಯಲ್ಲಿ ನಮೂದು ಮಾಡಿಲ್ಲ. ನಾನು ಯಾವುದೇ ಹಣವನ್ನು ಆರೋಪಿಗೆ ಕೊಡದೇ ಇದ್ದಿದ್ದರಿಂದ ನಾನು ಆದಾಯ ತೆರಿಗೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

6. ನನಗೆ ಹಾಗೂ ಆರೋಪಿಗೆ ಸುಮಾರು ಒಂದು ವರ್ಷದಿಂದ ಸಂಪರ್ಕ ಇರುವುದಿಲ್ಲ. ದಿಃ24-02-2024 ರಂದು ಆರೋಪಿಯು ನನಗೆ ಕೊನೆಯ ಬಾರಿಗೆ ಭೇಟಿ ಆಗಿರುತ್ತಾನೆ. ನಂತರ ಆರೋಪಿಯ ಜೊತೆಗೆ ಸಂಪರ್ಕ ಇರಲಿಲ್ಲ ಎಂದರೆ ಸಾಕ್ಷಿಯು ಚೆಕ್ ಬ್ಯಾಂಕ್ ಗೆ ಸಲ್ಲಿಸುವ ಬಗ್ಗೆ ಸಂಪರ್ಕ ಇತ್ತು ಎಂದು ಹೇಳುತ್ತಾರೆ. ನಾನು ಆರೋಪಿಯಿಂದ ಕಟ್ಟಡವನ್ನು ಬಾಡಿಗೆ ಪಡೆದ ಸಮಯದಲ್ಲಿ ನಾನು ಕೊಟ್ಟಂತಹ ರೂ.5,00,000/- ಡೆಪಾಸಿಟ್ ಹಣದ ಬಗ್ಗೆ ಆರೋಪಿಯ ಕಡೆಯಿಂದ ಒಂದು ಚೆಕ್ ನ್ನು ಭದ್ರತೆಗಾಗಿ ಪಡೆದುಕೊಂಡಿದ್ದೆ ಎಂದರೆ ಸಾಕ್ಷಿಯು ರೂ.12,00,000/- ಕ್ಕೆ ಚೆಕ್ ನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆರೋಪಿಯ ಕೊಟ್ಟಂತಹ ಡೆಪಾಸಿಟ್ ಹಣವನ್ನು ನಾನು ಕೊಡಬೇಕಾದಂತಹ ಬಾಡಿಗೆಯ ಹಣದಲ್ಲಿ ಹೊಂದಾಣಿಕೆ ಮಾಡಿದ್ದೀರಿ ಎಂದರೆ ಸರಿಯಲ್ಲ. ನನಗೆ ಆರೋಪಿಯು ಯಾವುದೇ ಹಣವನ್ನು ಕೊಡುವ ಭಾದ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ನಂತರ ಆರೋಪಿಯು ನನಗೆ ಚೆಕ್ ನ್ನು ಹಿಂದಿರುಗಿಸಲು ಕೇಳಿದಾಗ ಅದು ಮಿಸ್ ಪ್ಲೇಸ್ ಆಗಿದೆ ಎಂದು ತಿಳಿಸಿದೆ ಎಂದರೆ ಸರಿಯಲ್ಲ. ನನ್ನ ಮೇಲಿನ ವಿಶ್ವಾಸದಿಂದ ಆರೋಪಿಯು ನನಗೆ ಚೆಕ್ ನ್ನು ಹಿಂದಿರುಗಿಸಲು ಒತ್ತಾಯ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಹೆಚ್ಚಿಗೆ ಹಣ ಪಡೆದುಕೊಳ್ಳಬೇಕು ಎಂದು ದುರುದ್ದೇಶದಿಂದ ಸದರಿ ಚೆಕ್ ನ್ನು ರೂ.12,00,000/- ಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ಕೈಗಡ ಸಾಲದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಕಡೆಯಿಂದ ಕಾನೂನಿನ ಅಡಿಯಲ್ಲಿ ಪಡೆದುಕೊಳ್ಳುವ ಹಣ ಯಾವುದೂ ಇರುವುದಿಲ್ಲ

ಎಂದರೆ ಸರಿಯಲ್ಲ. ನಾನು ಖೊಟ್ಟಿ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.